# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಶ್ರೀ ಯು. ಬಿ. ವೆಂಕಟೇಶ್**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 654**

**ಉತ್ತರಿಸಬೇಕಾದ ದಿನಾಂಕ : 21.02.2023**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ಲಿ., ನಿಯಮಿತ ಹಾಗೂ ಕಣ್ವ ಗ್ರೂಪ್ ಆಫ್ ಕಂಪನೀಸ್‌ನ ಅವ್ಯವಹಾರದ ಪಿಐಎಲ್ ಡಬ್ಲ್ಯೂಪಿ.8746/ 2020ರ ವಿಚಾರಣೆಯಲ್ಲಿ ಸರ್ಕಾರವು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಸೆಕ್ಷನ್-35ರ ಪ್ರಕಾರ ಶಾಸನಬದ್ಧ ವಿಚಾರಣೆಯ ವರದಿಯನ್ನು ಸಲ್ಲಿಸಿದೆಯೇ? ಇದಕ್ಕಾಗಿ ಹೈಕೋರ್ಟ್ ಅಪರಾಧಗಳ ಪಟ್ಟಿಯಾನುಸಾರ ಸೆಕ್ಷನ್-36ರ ಪ್ರಕಾರ ಮತ್ತು ಸೆಕ್ಷನ್-37ರ ರೀತ್ಯಾ ಕ್ರಮ ಜರುಗಿಸಬೇಕೆಂದು ನಿರ್ದೇಶಿಸಿದೆ: ಆ ವಿಚಾರಣೆಯ ಪ್ರಾಸಿಕ್ಯೂಷನ್ ಯಾವ ಹಂತದಲ್ಲಿದೆ; | ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ನಿಯಮಿತ, ಬೆಂಗಳೂರು, ಇದಕ್ಕೆ ಸಂಬಂಧಿಸಿದಂತೆ ಉಪ ನಿಬಂಧಕರು, 1ನೇ ವಲಯ, ಬೆಂಗಳೂರು ನಗರ ಜಿಲ್ಲೆ ಇವರು ದಿನಾಂಕ:23.06.2021 ರಂದು ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ.<br><br>ವಿಚಾರಣಾ ವರದಿಯನ್ನು ಆಧರಿಸಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 37ರಡಿ ಕ್ರಮವಿಡುವಂತೆ ಸಹಕಾರ ಸಂಘಗಳ ನಿಬಂಧಕರು, ದಿನಾಂಕ:07.07.2021 ರಂದು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು, ವಿಶೇಷಾಧಿಕಾರಿಗಳು ಮತ್ತು ಸಹಕಾರಿಯ ಆಡಳಿತ ಮಂಡಲಿಗೆ ನಿರ್ದೇಶನ ನೀಡಿರುತ್ತಾರೆ.<br><br>ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 37ರಡಿ ಕ್ರಮವಿಟ್ಟು ದಿನಾಂಕ 17.12.2021ರಂದು ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರು (ಪ್ರ) ಇವರು ಅನುಪಾಲನಾ ವರದಿಯನ್ನು ಸಲ್ಲಿಸಿರುತ್ತಾರೆ.<br><br>ಮಾನ್ಯ ಪಿ.ಡಿ.ಜೆ ನ್ಯಾಯಾಲಯ ಬೆಂಗಳೂರು ಗ್ರಾಮಾಂತರದಲ್ಲಿ ಪ್ರಾಥಮಿಕ ದೋಷಾರೋಹಣ ಪಟ್ಟಿಯನ್ನು 21 ಆರೋಪಿಗಳ ವಿರುದ್ಧ ಸಲ್ಲಿಸಿದ್ದು ಘನ ನ್ಯಾಯಾಲಯವು ಸ್ಪೆಷಲ್ ಸಿಸಿ ನಂ.191/2021 ಮತ್ತು 192/2021 ನೀಡಿರುತ್ತದೆ. ಈ ಎರಡು ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಪ್ರಾಥಮಿಕ ದೋಷಾರೋಪಣೆ ಪಟ್ಟಿಯನ್ನು ಸಿ.ಐ.ಡಿ ವತಿಯಿಂದ ಸಲ್ಲಿಸಲಾಗಿರುತ್ತದೆ. |
| ಆ) | ಸದರಿ ಪ್ರಕರಣದಲ್ಲಿ 2018-19ರ ನಂತರ ಸಹಕಾರಿ ಕಾಯ್ದೆ 1997ರ ಸೆಕ್ಷನ್-33(1)ರ ಪ್ರಕಾರ ಎಷ್ಟು ಲೆಕ್ಕಪರಿಶೋಧನೆಗಳನ್ನು ಮಾಡಲಾಗಿದೆ; ಆರೋಪಿಗಳು ತಮ್ಮ ಜಾಮೀನು ಅರ್ಜಿಯ ಸಂದರ್ಭದಲ್ಲಿ ನ್ಯಾಯಾಲಯಕ್ಕೆ | 2018-19ರ ನಂತರ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 33(1) ರಡಿಯಲ್ಲಿ ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ಲಿ., ಬೆಂಗಳೂರು ಇದರ ನಿಯತ ಲೆಕ್ಕಪರಿಶೋಧನೆ ಆಗಿರುವುದಿಲ್ಲ.<br><br>ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 33(12)ರ ಪ್ರಕಾರ ಸಹಕಾರಿಯ 2016-17 ರಿಂದ 2018-19ನೇ |

| | | |
|---|---|---|
| | ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಘೋಷಿಸಿರುವಂತೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಸೆಕ್ಷನ್-33(12)ರ ಪ್ರಕಾರ ಲೆಕ್ಕಪರಿಶೋಧನೆ ಮಾಡಿ ಪರೀಕ್ಷಿಸಲಾಗಿದೆಯೇ; (ಸಂಪೂರ್ಣ ವಿವರಗಳನ್ನು ಒದಗಿಸುವುದು). | ಸಾಲುಗಳ ಮರುಲೆಕ್ಕಪರಿಶೋಧನೆಗೆ ಆದೇಶಿಸಿದ್ದು, ಈ ಕ್ರಮವು ಪ್ರಗತಿಯಲ್ಲಿರುತ್ತದೆ.<br>(ಮಾಹಿತಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ) |
| ಇ) | ಈ ಪ್ರಕರಣದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997 ರ ಸೆಕ್ಷನ್-33 (13-20) ರ ಪ್ರಕಾರ ಶಾಸನಬದ್ಧ ಸಮಗ್ರವಾದ ಸಹಕಾರಿ ಲೆಕ್ಕಪರಿಶೋಧನೆಗೆ ಆದೇಶಿಸಲಾಗಿದೆಯೇ; ಹಾಗಿದ್ದಲ್ಲಿ, ವಿಧಿವಿಜ್ಞಾನ ಲೆಕ್ಕಪರಿಶೋಧನೆಯ ವರದಿಯ ಸಾರಾಂಶವೇನು; ವಿಧಿವಿಜ್ಞಾನ ಲೆಕ್ಕಪರಿಶೋಧನೆಗೆ ಮಂಜೂರಾದ ಹಣವೆಷ್ಟು; ಖರ್ಚಾದ ಹಣವೆಷ್ಟು; ವಿಧಿವಿಜ್ಞಾನ ಲೆಕ್ಕಪರಿಶೋಧನೆಯಿಂದ ವಸೂಲಾತಿಗೆ ಸಂಬಂಧಿಸಿದಂತೆ ಆದ ಪ್ರಯೋಜನವೇನು; | ಸರ್ಕಾರದ ಆದೇಶ ಸಂಖ್ಯೆ:ಸಇ 28 ಸಿಎಲ್ಎಮ್ 2020, ದಿನಾಂಕ.31-07-2020ರ ರೀತ್ಯಾ ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ಲಿ., ಬೆಂಗಳೂರು, ಇದರ 2016-17, 2017-18 ಮತ್ತು 2018-19ನೇ ಸಾಲುಗಳ ಮರು ಲೆಕ್ಕಪರಿಶೋಧನೆ ಕೈಗೊಳ್ಳಲು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರನ್ನು ನೇಮಕ ಮಾಡಲಾಗಿದೆ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಸಇ 28 ಸಿಎಲ್ಎಮ್ 2020, ದಿನಾಂಕ:29.07.2021ರ ರೀತ್ಯಾ ಸಹಕಾರಿಯ ಸದರಿ ಸಾಲುಗಳನ್ನು ಸಹ ವಿಧಿ ವಿಜ್ಞಾನ ಲೆಕ್ಕಪರಿಶೋಧನೆ ಕೈಗೊಳ್ಳಲು ಮೆ: ಬಿ.ಪಿ.ಎಸ್.ಎಸ್.ವೈ ಅಂಡ್ ಕೋ, ಸನ್ನದು ಲೆಕ್ಕಪರಿಶೋಧಕರು, ಬೆಂಗಳೂರು ಇವರನ್ನು ನೇಮಿಸಿ ಆದೇಶಿಸಲಾಗಿದೆ.<br><br>ವಿಧಿವಿಜ್ಞಾನ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಪುಸ್ತಕಗಳು/ ದಾಖಲೆಗಳು ಲಭ್ಯವಿಲ್ಲದೇ ಇದ್ದರೂ, ಸಂಬಂಧಿಸಿದ ಸಂಸ್ಥೆಗಳ ಹಣದ ಒಳಹರಿವಿನ ಹಾಗೂ ಹೊರಹರಿವಿನ ಬಗ್ಗೆ ಜಾಡು ಹಿಡಿದು ಪತ್ತೆ ಹಚ್ಚಿ ಪರಿಶೀಲಿಸುವ ಕ್ರಮವನ್ನು ವಿಧಿವಿಜ್ಞಾನ ಲೆಕ್ಕಪರಿಶೋಧನೆಯಲ್ಲಿ ಕೈಗೊಳ್ಳಲಾಗುತ್ತದೆ. ಸಂಸ್ಥೆಗಳಲ್ಲಿ ವ್ಯವಹಾರಗಳು ಜರುಗಿರುವ ನಿಖರವಾದ ವೇಳೆ, ವಿಧಾನ, ಗಣಕಯಂತ್ರಗಳನ್ನು ಯಾವ ವ್ಯಕ್ತಿ, ಯಾವ ಸಮಯಕ್ಕೆ ಬಳಸಿರುತ್ತಾರೆ ಎಂಬ ಬಗ್ಗೆ ಮಾಹಿತಿ, ಅವ್ಯವಹಾರಗಳು ಜರುಗಿದ್ದಲ್ಲಿ ಅದರ ವಿಧಿವಿಧಾನ ಹಾಗೂ ಅದಕ್ಕೆ ಜವಾಬ್ದಾರರಾಗಿರುವ ವ್ಯಕ್ತಿಗಳ ನಿಖರವಾದ ಮಾಹಿತಿ ವಿಧಿವಿಜ್ಞಾನ ಲೆಕ್ಕಪರಿಶೋಧನೆಯಿಂದ ಪತ್ತೆ ಹಚ್ಚಬಹುದಾಗಿರುತ್ತದೆ.<br><br>ಸರ್ಕಾರದ ಆದೇಶದಂತೆ ವಿಧಿವಿಜ್ಞಾನ ಲೆಕ್ಕಪರಿಶೋಧನಾ ಸಂಭಾವನೆಯನ್ನು ಸಕ್ಷಮ ಪ್ರಾಧಿಕಾರಿ, ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ಲಿ., ಬೆಂಗಳೂರು ರವರು ಭರಿಸಬೇಕಾಗಿರುತ್ತದೆ.<br><br>ವಿಧಿವಿಜ್ಞಾನ ಲೆಕ್ಕಪರಿಶೋಧನೆಯು ಪ್ರಗತಿಯಲ್ಲಿದ್ದು, ಇದಕ್ಕೆ ಪ್ರತ್ಯೇಕವಾಗಿ ಯಾವುದೇ ಅನುದಾನ ಮಂಜೂರು ಆಗಿರುವುದಿಲ್ಲ. |
| ಈ) | ಸದರಿ ಪ್ರಕರಣದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಸೆಕ್ಷನ್-38ಎ ರ ಪ್ರಕಾರ ವಿಶೇಷ ಅಧಿಕಾರಿಯ | ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ 38ಎ ರನ್ವಯ ನೇಮಕವಾಗುವ ವಿಶೇಷಾಧಿಕಾರಿಯು ಕೇವಲ ಸಹಕಾರಿಯ ಚುನಾವಣೆಗೆ ಸಂಬಂಧಿಸಿದಂತೆ ಮಾತ್ರ ನೇಮಕವಾಗಿರುತ್ತಾರೆ. |

| | | |
|---|---|---|
| | ಅಧಿಕಾರಾವಧಿಯಲ್ಲಿ ಎಷ್ಟು ಖಾತೆಗಳು, ಪುಸ್ತಕಗಳು, ದಾಖಲೆಗಳು, ಹಾರ್ಡ್ ಡಿಸ್ಕ್‌ಗಳು ಮತ್ತು ಇತರೆ ವ್ಯವಹಾರಗಳ/ ವಹಿವಾಟುಗಳ ಪುರಾವೆಗಳನ್ನು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಸೆಕ್ಷನ್-38ಬಿ (1) ರ ಪ್ರಕಾರ ಮಹಜರು ವರದಿಯಲ್ಲಿ ಪಟ್ಟಿ ಮಾಡಲಾಗಿದೆ; ಮಾಡಿದ್ದಲ್ಲಿ, ಈ ಸಂಬಂಧ ಪ್ರಕರಣವನ್ನು ದಾಖಲಿಸಲಾಗಿದೆಯೇ; (ಅವುಗಳ ಸಂಪೂರ್ಣ ವಿವರಗಳನ್ನು ಒದಗಿಸುವುದು) | ಪರಿವೀಕ್ಷಣೆ, ಲೆಕ್ಕಪರಿಶೋಧನೆ ಮತ್ತು ವಿಚಾರಣೆಯ ಸಂದರ್ಭದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರ ಕಲಂ-38ಬಿ ರ ಪ್ರಕಾರ ಯಾವುದೇ ಪುಸ್ತಕಗಳು, ದಾಖಲೆಗಳು, ಹಾರ್ಡ್ ಡಿಸ್ಕ್‌ಗಳು ಮತ್ತು ಇತರೆ ವ್ಯವಹಾರಗಳ/ವಹಿವಾಟುಗಳ ಪುರಾವೆಗಳ ಬಗ್ಗೆ ಮಹಜರು ಪಟ್ಟಿ ಮಾಡಲಾಗಿರುವುದಿಲ್ಲ.<br><br>ಸಂಸ್ಥೆಯಲ್ಲಿದ್ದ ಎಲ್ಲಾ ಲೆಕ್ಕ ಪುಸ್ತಕಗಳು ಹಾಗೂ ಮೂಲ ದಾಖಲಾತಿಗಳನ್ನು ಸಿ.ಐ.ಡಿಯವರು ತಮ್ಮ ವಶಕ್ಕೆ ಪಡೆದುಕೊಂಡಿರುತ್ತಾರೆಂದು ವಿಚಾರಣಾಧಿಕಾರಿಗಳು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. |

**ಸಿಒ 25 ಸಿಎಲ್‌ಎಮ್ 2023 (ಇ)**

**(ಎಸ್. ಟಿ. ಸೋಮಶೇಖರ್)**
**ಸಹಕಾರ ಸಚಿವರು**

110

**ಕರ್ನಾಟಕ ಸರ್ಕಾರ**

ಸಂಖ್ಯೆ: ಸಿಒ 28 ಸಿಎಲ್‌ಎಂ 2020 (ಇ)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು,ದಿನಾಂಕ:29.08.2020.

## ತಿದ್ದುಪಡಿ ಆದೇಶ

ಸರ್ಕಾರದ ಸಂಖ್ಯೆ: ಸಿಒ 28 ಸಿಎಲ್‌ಎಂ 2020 (ಇ) ದಿನಾಂಕ:31.07.2020 ರ ಆದೇಶದ ಭಾಗದ ಮೊದಲನೇ ಪ್ಯಾರಾದ ಕೊನೆಯ ಸಾಲಿನಲ್ಲಿ "ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 63(13-ಎ) ರೀತ್ಯಾ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಅನುಮತಿ ನೀಡಿ ಆದೇಶಿಸಿದೆ" ಎಂಬುದರ ಬದಲಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಕಲಂ 33(13) ರನ್ವಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಅನುಮತಿ ನೀಡಿ ಆದೇಶಿಸಿದೆ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು. ಇನ್ನುಳಿದಂತೆ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

29/8/2020

**(ಮನೋರಮ ಡಿ.ಸಿ)**
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ.

**ಇವರಿಗೆ:**

ಸಂಕಲನಕಾರರು ಕರ್ನಾಟಕ ರಾಜ್ಯ ಬೆಂಗಳೂರು ಇ-ಗೆಜೆಟ್‌ನಲ್ಲಿ ಪ್ರಕಟಿಸಲು ಕೋರಿದೆ.

**ಪ್ರತಿಗಳು -**

1. ಪ್ರಧಾನ ಮಹಾಲೇಖಪಾಲರು ಕರ್ನಾಟಕ ರಾಜ್ಯ ಬೆಂಗಳೂರು
2. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಹಕಾರ ಇಲಾಖೆ ಬೆಂಗಳೂರು.
4. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ನಂ.17, ಜಯನಿವಾಸ, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು.
5. ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಬೆಂಗಳೂರು.
6. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು, 1ನೇ ವಲಯ ಬೆಂಗಳೂರು ನಗರ ಜಿಲ್ಲೆ.
7. ಅಧ್ಯಕ್ಷರು/ಕಾರ್ಯದರ್ಶಿ, ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ನಿ., ನಂ.861, ವೆಸ್ಟ್ ಆಫ್ ಕಾರ್ಡ್ ರಸ್ತೆ 2ನೇ ಹಂತ ಮೋದಿ ಆಸ್ಪತ್ರೆ ಎದುರು ಬೆಂಗಳೂರ - 86.
8. ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಹಕಾರ ಇಲಾಖೆ.
9. ಶಾಖಾ ರಕ್ಷಾ ಕಡತ ಹೆಚ್ಚುವರಿ ಪ್ರತಿಗಳು.

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ನಿ., ಬೆಂಗಳೂರು ಇದರ 2016-17, 2017-18 ಮತ್ತು 2018-19 ನೇ ಸಾಲುಗಳ ಲೆಕ್ಕಪತ್ರಗಳನ್ನು ಮರು ಲೆಕ್ಕಪರಿಶೋಧನೆಗೆ ಒಳಪಡಿಸುವ ಬಗ್ಗೆ.

ಓದಲಾಗಿದೆ:
1. ಸಹಕಾರ ಸಂಘಗಳ ನಿಬಂಧಕರು ಇವರ ಪತ್ರ ಸಂಖ್ಯೆ:ಆರ್‌ಸಿಎಸ್/ಆರ್‌ಎಸ್‌ಆರ್/ಸೌಹಾರ್ದ/142/2019-2020 ದಿನಾಂಕ:05.03.2020.
2. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಕರ್ನಾಟಕ ರಾಜ್ಯ ಬೆಂಗಳೂರು ಇವರ ಪತ್ರ ಸಂಖ್ಯೆ:ತಪಷ/ಬೆಂವಿ/18/2019-2020 ದಿನಾಂಕ:25.06.2020.

10 AUG 2020 11/8/20

**********

ಪ್ರಸ್ತಾವನೆ:

ಮೇಲೆ ಓದಲಾದ (1)ರಲ್ಲಿ ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ನಿ., ಬೆಂಗಳೂರು ಇದರ 2016-17-, 2017-18 ಮತ್ತು 2018-19ನೇ ಸಾಲುಗಳ ಲೆಕ್ಕ ಪತ್ರಗಳಲ್ಲಿ ಈ ಕೆಳಕಂಡ ಹಲವಾರು ನ್ಯೂನತೆ ಹಾಗೂ ಲೋಪದೋಷಗಳು ಕಂಡುಬಂದಿರುವ ಕಾರಣ ಸದರಿ ಸಂಘದ 2016-17, 2017-18 ಮತ್ತು 2018-19ನೇ ಸಾಲುಗಳ ಲೆಕ್ಕ ಪುಸ್ತಕಗಳನ್ನು ಮರುಲೆಕ್ಕಪರಿಶೋಧನೆಗೆ ಒಳಪಡಿಸುವಂತೆ ಹಾಗೂ ಸದರಿ ಸಾಲುಗಳ ಲೆಕ್ಕ ಪುಸ್ತಕಗಳನ್ನು ಮರುಲೆಕ್ಕಪರಿಶೋಧನೆ ಕೈಗೊಳ್ಳುವಂತೆ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ:ತಪಷ/ಬೆಂವಿ/18/2019-20, ದಿ:13-02-2020ರಲ್ಲಿ ಕೋರಿರುವುದಾಗಿ ಸಹಕಾರ ಸಂಘಗಳ ನಿಬಂಧಕರು ತಿಳಿಸಿರುತ್ತಾರೆ.

- ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ನಿ., ಬೆಂಗಳೂರು ಇದರ 2018-19ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಂತೆ ದಿ:31-03-2019ಕ್ಕೆ ಸಂಸ್ಥೆಯು ರೂ.07ಕೋಟಿ ಲಾಭಗಳಿಸಿದ್ದು, ಪರಿವೀಕ್ಷಣಾ ವರದಿಯಂತೆ ದಿ:31-03-2019ಕ್ಕೆ ಸಂಸ್ಥೆಯು ರೂ.494ಕೋಟಿ ನಷ್ಟದಲ್ಲಿರುತ್ತದೆ ಎಂದು ವರದಿಸಿರುತ್ತಾರೆ.
- ಪರಿವೀಕ್ಷಣಾ ವರದಿಯಂತೆ ಸಂಸ್ಥೆಯು ನೀಡಲಾಗಿರುವ ಸಾಲಗಳಲ್ಲಿ ಶೇ.95ಕ್ಕೂ ಹೆಚ್ಚು ಸಾಲಗಳು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಕಣ್ವ ಸಮೂಹಕ್ಕೆ ನೀಡಲಾಗಿರುತ್ತದೆ ಎಂದು ವರದಿಸಿರುತ್ತಾರೆ.
- ಸಹಕಾರಿಯು ಸಂಗ್ರಹಿಸಿದ ಒಟ್ಟು ಠೇವಣಿಗಳಲ್ಲಿ ದಿ:31-03-2019ಕ್ಕೆ 4438 ಠೇವಣಿಗಳು ಪಕ್ವವಾಗಿದ್ದು, ಇವುಗಳ ಮರುಪಾವತಿಯಾಗಿರುವುದಿಲ್ಲ ಹಾಗೂ ನವೀಕರಣ ಸಹ ಆಗಿರುವುದಿಲ್ಲವೆಂದು ತಿಳಿಸಿರುತ್ತಾರೆ.
- ಸಹಕಾರಿಯು ಒಟ್ಟು 950 ವ್ಯವಹಾರ ಸಾಲಗಳನ್ನು ಕಣ್ವ ಸಮೂಹ ಕಂಪನಿಗಳಿಗೆ ನೀಡಲಾಗಿದ್ದು, ಈ ಸಾಲಗಳಿಗೆ ಯಾವುದೇ ಭದ್ರತೆ ಪಡೆದಿರುವುದಿಲ್ಲ. ಆದ್ದರಿಂದ ಈ ಸಾಲಗಳು ಅನುಮಾನಾಸ್ಪದ ಸಾಲಗಳಾಗಿರುವುದಾಗಿ ತಿಳಿಸಿರುತ್ತಾರೆ.
- ಸಹಕಾರಿಯು ಒಟ್ಟು 31 ನಿವೇಶನ ಸಾಲಗಳನ್ನು ನೀಡಿದ್ದು, ಇವುಗಳಲ್ಲಿ 30 ಸಾಲಗಳನ್ನು ಕಣ್ವ ಡೆವಲಪರ್ಸ್ ನಿಂದ ನಿವೇಶನ ಖರೀದಿಸಲು ಸದಸ್ಯರಿಗೆ ನೀಡಲಾಗಿದ್ದು, ಇದರ ಬಾಕಿ ಮೊತ್ತ ರೂ.1.22ಕೋಟಿಯಾಗಿರುತ್ತದೆ. ಸಹಕಾರಿಯ ನಿರ್ದೇಶಕರಾದ ಶ್ರೀ ನಂಜುಂಡಯ್ಯರವರ ಹೆಂಡತಿಯೆಂದು ತಿಳಿದು ಬಂದಿರುವ ಶ್ರೀಮತಿ ಪ್ರವೀಣ ರವರಿಗೆ ರೂ.10.00ಕೋಟಿ ನಿವೇಶನ ಸಾಲ ನೀಡಲಾಗಿದೆ. ಈ ಸಾಲದ ಕಡತ ಪರಿಶೀಲನೆಗೆ ಲಭ್ಯವಿರುವುದಿಲ್ಲ. ಈ ಸಾಲವು ಸಹ ಅನುಮಾನಾಸ್ಪದವಾಗಿದ್ದು, ಕೂಲಂಕಷವಾದ ಪರಿಶೀಲನೆ ಅಗತ್ಯವಾಗಿರುವುದಾಗಿ ತಿಳಿಸಿರುತ್ತಾರೆ.
- ಸಂಸ್ಥೆಯು 2,886 ಪ್ರಕರಣಗಳಲ್ಲಿ ವೈಯಕ್ತಿಕ ಸಾಲ ನೀಡಿದ್ದು, ಇವುಗಳಲ್ಲಿ ಹೆಚ್ಚಿನ ಸಾಲಗಳನ್ನು ಕಣ್ವ ಸಮೂಹದ ಸಿಬ್ಬಂದಿಗಳಿಗೆ ನೀಡಲಾಗಿದೆ ಎಂದು ತಿಳಿಸಿರುತ್ತಾರೆ.

- ಸಂಸ್ಥೆಯು [illegible] ಓವರ್ ಡ್ರಾಫ್ಟ್ ಸಾಲ ನೀಡಿದ್ದು, [illegible] ಸಾಲಗಳಲ್ಲಿ ಅನುಮೋದನೆಗಿಂತ ಹೆಚ್ಚಿನ ಮೊತ್ತ ಉಪಯೋಗಿಸಲಾಗಿದೆ. ಈ ಓವರ್ ಡ್ರಾಫ್ಟ್ ಸಾಲಗಳಲ್ಲಿ ಹೆಚ್ಚಿನವು ಅಂದರೆ 92 ಓವರ್ ಡ್ರಾಫ್ಟ್ ಖಾತೆಗಳು ಕಣ್ವ ಗ್ರೂಪ್ ಗೆ ಸಂಬಂಧಿಸಿದ್ದಾಗಿದೆ ಮತ್ತು 42 ಓವರ್ ಡ್ರಾಫ್ಟ್ ಖಾತೆಗಳ ಸಾಲಗಳಿಗೆ ಯಾವುದೇ ಬಡ್ಡಿ ವಿಧಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ.
- ಸಂಸ್ಥೆಯ(ಸಹಕಾರಿಯ) 15 ನಿರ್ದೇಶಕರುಗಳಲ್ಲಿ 10 ನಿರ್ದೇಶಕರಿಗೆ ಸಾಲ ನೀಡಿದ್ದು ದಿ:31-03-2019ಕ್ಕೆ ಒಟ್ಟು ಸಾಲ ಬಾಕಿ ರೂ.15,58,84,204/-ಗಳಿದ್ದು ಈ ಎಲ್ಲಾ ಸಾಲಗಳು ಸುಸ್ತಿಯಾಗಿರುವುದಾಗಿ ತಿಳಿಸಿರುತ್ತಾರೆ.
- ಸಂಸ್ಥೆಯು ಒಟ್ಟು 11500 ಖಾತೆಗಳಿಗೆ ಸಾಲಗಳನ್ನು ನೀಡಿದ್ದು, ಅವುಗಳಲ್ಲಿ 10347 ಖಾತೆಗಳ (ಶೇ.90) ಸಾಲಗಳು ದಿ:31-03-2019ರಂತೆ 01 ವರ್ಷಕ್ಕೂ ಹೆಚ್ಚಿನ ಅವಧಿಗೆ ವಸೂಲಾಗದೇ ಇರುವ ಸಾಲಗಳಾಗಿವೆ. ಈ ಸಾಲಗಳಲ್ಲಿ 8954 ಖಾತೆಗಳಲ್ಲಿ (ಶೇ.78) ಸಾಲ ನೀಡಿದ ನಂತರ ಯಾವುದೇ ಮೊತ್ತ ವಸೂಲಾಗಿರುವುದಿಲ್ಲ.
- ಮುಖ್ಯ ಕಾರ್ಯನಿರ್ವಾಹಕರು ನೀಡಿರುವ ದಾಖಲೆಯಂತೆ ಸಹಕಾರಿಯು ದಿ:31.03.2019ರಂತೆ ರೂ.13,03,18,571/- ಮೀಸಲು ನಿಧಿ ಹೊಂದಿರುತ್ತದೆ. ಸಹಕಾರಿಯು ಮೀಸಲು ನಿಧಿಯನ್ನು ಯಾವುದೇ ಬ್ಯಾಂಕಿನಲ್ಲಿ ಪ್ರತ್ಯೇಕವಾಗಿ ಹೂಡಿಕೆ ಮಾಡಿರುವುದಿಲ್ಲ ಮತ್ತು ಪರಿವೀಕ್ಷಣಾ ವರದಿಯಂತೆ ಮೀಸಲು ನಿಧಿಯನ್ನು ವಿವಿಧ ಚಟುವಟಿಕೆಗಳಿಗೆ/ ಸಂಘ ಸಂಸ್ಥೆಗಳಿಗೆ ದೇಣಿಗೆ ನೀಡಲು ಉಪಯೋಗಿಸಲಾಗಿದ್ದು, ಇದು ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮ 7ರ ಉಲ್ಲಂಘನೆಯಾಗಿರುವುದಾಗಿ ತಿಳಿಸಿರುತ್ತಾರೆ.
- ಸಹಕಾರಿಯು ಒಟ್ಟು 202 ವಾಹನ ಸಾಲ ನೀಡಿದ್ದು, ಎಲ್ಲಾ ಸಾಲಗಳನ್ನೂ ಸಹ ಕಣ್ವ ಸಮೂಹದ ಸಿಬ್ಬಂದಿಗಳಿಗೆ ವಾಹನ ಖರೀದಿಗಾಗಿ ನೀಡಲಾಗಿದ್ದು, ಇತರ ಸದಸ್ಯರಿಗೆ ಯಾವುದೇ ವಾಹನ ಸಾಲ ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ.
- ಸಹಕಾರಿಯು ನೀಡಿರುವ ಸಾಲ ರೂ.1.00ಕೋಟಿಗೂ ಹೆಚ್ಚು ಬಾಕಿ ಇರುವ ಸಾಲದ ಕಡತಗಳನ್ನು ಪರಿಶೀಲಿಸಿದ್ದು, ಸಾಲದ ಅರ್ಜಿ ಇತ್ಯಾದಿ ದಾಖಲೆಗಳು ಲಭ್ಯವಿಲ್ಲದೇ ಇರುವುದು ಕಂಡು ಬಂದಿರುವುದಾಗಿ ತಿಳಿಸಿರುತ್ತಾರೆ.
- ಸಹಕಾರಿಯು ಕಣ್ವ ಸಮೂಹ ಸಿಬ್ಬಂದಿಗಳಿಗೆ ನೀಡಿರುವ ಸಾಲಗಳ ಸಂಖ್ಯೆ 4,500ಕ್ಕೂ ಹೆಚ್ಚು ಇದ್ದು ಈ ಸಾಲಗಳು ವಸೂಲಾತಿಯಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.
- ಸಹಕಾರಿಯು 2016ರ ಪೂರ್ವದಲ್ಲಿ ನೀಡಿರುವ 7738 ಸಾಲಗಳಲ್ಲಿ ಇದುವರೆಗೆ ಯಾವುದೇ ಮೊತ್ತ ವಸೂಲಾಗಿರುವುದಿಲ್ಲ. 2017-18ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಸುಸ್ತಿ ಸಾಲಗಳ ಸಂಖ್ಯೆ 82 ಮೊತ್ತ ರೂ.6,14,97,154/- ಎಂದು ದಾಖಲಾಗಿರುತ್ತದೆ. ವಾಸ್ತವಕ್ಕೂ ಈ ಮೊತ್ತಕ್ಕೂ ಅಜಗಜಾಂತರ ವ್ಯತ್ಯಾಸ ವಿರುವುದಾಗಿ ತಿಳಿಸಿರುತ್ತಾರೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ನಿ., ಬೆಂಗಳೂರು ಇದರ 2016-17, 2017-18 ಮತ್ತು 2018-19ರ ವರೆಗಿನ ಅವಧಿಯಲ್ಲಿ ಹೆಚ್ಚಿನ ಹಣ ದುರುಪಯೋಗ ಮತ್ತು ನಿಯಮಗಳ ಉಲ್ಲಂಘನೆಯಾಗಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ನಿರ್ದೇಶಕರು ಲೆಕ್ಕಪರಿಶೋಧನಾ ಇಲಾಖೆ ಇವರು ಸಲ್ಲಿಸಿರುವ ಪ್ರಸ್ತಾವನೆಯು ಸಮಂಜಸವಾಗಿದ್ದು, ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ನಿ., ಬೆಂಗಳೂರು ಇದರ 2016-17, 2017-18 ಮತ್ತು 2018-19ನೇ ಸಾಲುಗಳ ಮರು ಲೆಕ್ಕಪರಿಶೋಧನೆಯನ್ನು ಕೈಗೊಳ್ಳಲು ಆದೇಶ ನೀಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (2)ರಲ್ಲಿ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ನಿ., ಬೆಂಗಳೂರು ಇದರ 2016-17, 2017-18 ಮತ್ತು 2018-19ನೇ ಸಾಲುಗಳ ಪರಿಶೋಧಿತ ಲೆಕ್ಕಪತ್ರಗಳನ್ನು ಮರು ಲೆಕ್ಕಪರಿಶೋಧನೆ ಕೈಗೊಳ್ಳಲು ಶ್ರೀಮತಿ ಸಾಧನಾ ಗಾಂವಕರ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಬೆಂಗಳೂರು ಜಿಲ್ಲೆ ರವರು, ಒಬ್ಬ ಸಹಾಯಕ ನಿರ್ದೇಶಕರು ಹಾಗೂ ಒಬ್ಬ ಹಿರಿಯ ಲೆಕ್ಕಪರಿಶೋಧಕರ ಸಹಾಯದೊಂದಿಗೆ ಮರುಲೆಕ್ಕಪರಿಶೋಧನೆ ಕೈಗೊಳ್ಳಲು ಅನುಮತಿ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಪ್ರಸ್ತಾವನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ

ಸರ್ಕಾರದ ಆದೇಶ ಸಂಖ್ಯೆ: ಸಇ 28 ಸಿಎಲ್‌ಎಮ್ 2020 (ಇ) ಬೆಂಗಳೂರು, ದಿನಾಂಕ: 31.07.2020

ಪ್ರಸ್ತಾವನೆಗಳಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ನಿ., ಬೆಂಗಳೂರು ಇದರ 2016-17, 2017-18 ಮತ್ತು 2018-19ನೇ ಸಾಲುಗಳಲ್ಲಿ ಕಂಡುಬಂದಿರುವ ಹಣ ದುರುಪಯೋಗದ ನ್ಯೂನ್ಯತೆಗಳಿಗೆ ಸಂಬಂಧಿಸಿದಂತೆ ಸದರಿ ಸಾಲುಗಳ ಪರಿಶೋಧಿತ ಲೆಕ್ಕಗಳನ್ನು ಮರು ಲೆಕ್ಕಪರಿಶೋಧನೆ ಕೈಗೊಳ್ಳಲು ಶ್ರೀಮತಿ ಸಾಧನಾ ಗಾಂವಕರ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಜಂಟಿ ನಿರ್ದೇಶಕರು, ಬೆಂಗಳೂರು ಜಿಲ್ಲೆ, ಒಬ್ಬ ಸಹಾಯಕ ನಿರ್ದೇಶಕರು ಹಾಗೂ ಒಬ್ಬ ಹಿರಿಯ ಲೆಕ್ಕಪರಿಶೋಧಕರ ಸಹಾಯದೊಂದಿಗೆ ಮರುಲೆಕ್ಕಪರಿಶೋಧನೆ ಕೈಗೊಳ್ಳಲು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 63(13-ಎ) ರ ರೀತ್ಯಾ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರಿಗೆ ಅನುಮತಿ ನೀಡಿ ಆದೇಶಿಸಿದೆ.

ಸದರಿ ಸಾಲುಗಳ ಮರು ಲೆಕ್ಕಪರಿಶೋಧನೆ ನಡೆಸಿ ನಿಗಧಿತ ಅವಧಿಯೊಳಗೆ ಲೆಕ್ಕಪರಿಶೋಧನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

31/7/2020
(ಮನೋರಮ ಡಿ.ಸಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಹಕಾರ ಇಲಾಖೆ

ಇವರಿಗೆ ಮಾಹಿತಿಗಾಗಿ: -

1. ಪ್ರಧಾನ ಮಹಾಲೇಖಪಾಲರು ಕರ್ನಾಟಕ ರಾಜ್ಯ ಬೆಂಗಳೂರು
2. ಸಹಕಾರ ಸಂಘಗಳ ನಿಬಂಧಕರು, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-52.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಸಹಕಾರ ಇಲಾಖೆ ಬೆಂಗಳೂರು.
4. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು, ನಂ.17, ಜಯನಿವಾಸ, ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು.
5. ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಬೆಂಗಳೂರು.
6. ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಉಪನಿರ್ದೇಶಕರು, 1ನೇ ವಲಯ ಬೆಂಗಳೂರು ನಗರ ಜಿಲ್ಲೆ.
7. ಅಧ್ಯಕ್ಷರು/ಕಾರ್ಯದರ್ಶಿ, ಶ್ರೀ ಕಣ್ವ ಸೌಹಾರ್ದ ಕೋ-ಆಪರೇಟಿವ್ ಕ್ರೆಡಿಟ್ ನಿ., ನಂ.861, ವೆಸ್ಟ್ ಆಫ್ ಕಾರ್ಡ್ ರಸ್ತೆ 2ನೇ ಹಂತ ಮೋದಿ ಆಸ್ಪತ್ರೆ ಎದುರು ಬೆಂಗಳೂರ - 86.
8. ಸರ್ಕಾರದ ಅಧೀನ ಕಾರ್ಯದರ್ಶಿ-3, ಸಹಕಾರ ಇಲಾಖೆ, ಬೆಂಗಳೂರು.
9. ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಹಕಾರ ಇಲಾಖೆ.